ದಿನಾಂಕಃ 04-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಅದೇ ದಿನ ಪುನಃ 5,000/- ರೂ. online ನೀಡಿರುತ್ತೇನೆ. ದಿಃ 02-06-2019 ರಂದು ಆರೋಪಿಯು ನನಗೆ ತನ್ನ ರೂಂ ಗೆ ಕರೆದು ನಿನ್ನಿಂದ ನನಗೆ ವ್ಯಾಪಾರದಲ್ಲಿ ನಷ್ಟ ಉಂಟಾಗಿದ್ದು, ಎಂದು ಹೇಳಿ ಚಾಸಾ 11 ರವರಿಗೆ ಕರೆ ಮಾಡಿ ಅವರಿಂದ ನನ್ನ ಮೇಲೆ ಕೇಸು ಹಾಕುತ್ತೇನೆಂದು ಹೇಳಿ ನನ್ನಿಂದ ಪುನಃ 20 ಲಕ್ಷ ನೀಡುವಂತೆ ಬೆದರಿಸಿರುತ್ತಾರೆ. ಅದೇ ದಿನ ನನ್ನ ಸ್ನೇಹಿತ ಅಬಿಲಾಷ್ ರವರು ನನ್ನ ಅಣ್ಣನಾದ ಚಾಸಾ 3 ರವರಿಂದ ರೂ. 3,00,000/-ರೂ ಚೆಕ್ ನ್ನು ಚಾಸಾ 8 ಆರೋಪಿಗೆ ನೀಡಿರುತ್ತಾರೆ.

ನಾನು ಚಾಸಾ 4 ರವರಿಗೆ ಸಂಬಂದಿಸಿದ ರೂ. 5,00,000/- ಮೊತ್ತವನ್ನು ಆರೋಪಿಗೆ ಹೆದರಿ ನೀಡಿರುತ್ತೇನೆ. ಮರುದಿನ ಪುನಃ ಚಾಸಾ 4 ರವರಿಗೆ ಸಂಬಂಧಿಸಿದ ರೂ.3,00,00/- ಚೆಕ್ನು ನೀಡಿರುತ್ತೇನೆ. ದಿಃ 07-06-2019 ಮತ್ತು 8-06-2019 ರಂದು ನನ್ನಿಂದ ಹಾಗೂ ಚಾಸಾ 2 ವರಿಂದ ರೂ.25,00,000/- ಕೊಡ ಬೇಕೆಂದು ಹೆದರಿಸಿ ಖಾಲಿ ಸ್ಟಾಂಪ್ ಮೇಲೆ ಸಹಿ ಮಾಡಿಸಿರುತ್ತಾರೆ.

ಮರುದಿನ ಬರೆದುಕೊಟ್ಟ ಸ್ಟಾಂಪ್ ಪೇಪರನ್ನ ಆರೋಪಿ ಚಾಸಾ 4 ರವರ ಬಳಿ ತೆಗೆದುಕೊಂಡು ಹೋಗಿ ಅವರಿಂದ ಪುನಃ 6,00,000/- ಚೆಕ್ ನ್ನು ಪಡೆದಿರುತ್ತಾರೆ. ಆ ಚೆಕ್ ನ್ನು ಅವರು ತಮ್ಮ ಖಾತೆಯಾದ ವಿಲ್ ಸ್ ಟೂ ಖಾತೆಗೆ ಜಮಾ ಮಾಡಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.